ಕರ್ನಾಟಕದಲ್ಲಿ ವೆಂಕಟಸ್ವಾಮಿ ಆಯೋಗ ರಚನೆಯಾದ ಬಗ್ಗೆ

೩೯೮. ಶ್ರೀ ಪಾಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ವೆಂಕಟಸ್ವಾಮಿ ಆಯೋಗದ ವಿಸರ್ಜಿತ ವರದಿಯನ್ನು ಸರಕಾರದವರು ಕೈ ಬಿಟ್ಟಿದ್ದಕ್ಕೆ ಕಾರಣವೇನು ?

(ಆ) ಸದರಿ ಆಯೋಗಕ್ಕಾಗಿ ಸರಕಾರಕ್ಕೆ ಬಂದಿರುವ ಒಟ್ಟಾರೆ ವಿಚರ್ಚ ಎಷ್ಟು ?

(ಇ) ವಿಸರ್ಜಿತ ವರದಿಯ ಬಗ್ಗೆ ಸದರಿ ಆಯೋಗದಿಂದ ಅನ್ಯಾಯಕ್ಕೆ ಯಾವ ಯಾವ ಜನಾಂಗದವರು ಒಳಪಟ್ಟಿರುವರು ?

ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳನ್ನು ವೆಂಕಟಸ್ವಾಮಿ ಆಯೋಗವು ಪೂರಾ ಅಳವಡಿಸಿಕೊಂಡಿಲ್ಲದಿರುವುದರಿಂದ ಹಾಗೂ ಸಂಗ್ರಹಿಸಿದ ಮಾಹಿತಿಯು ದೋಷರಹಿತವೆಂದು ನಂಬಲು ಅಸಾಧ್ಯವಾದುದರಿಂದ ಸರ್ಕಾರ ಹೊಸ ಆಯೋಗವನ್ನು ರಚಿಸಲು ತೀರ್ಮಾನಿಸಿದ್ದರಿಂದ ವೆಂಕಟಸ್ವಾಮಿ ಆಯೋಗದ ವರದಿಯನ್ನು ಕೈಬಿಡಲಾಗಿದೆ.

(ಆ) ೫೮. ೪೩ ಲಕ್ಷ ರೂಪಾಯಿಗಳು.

(ಇ) 'ಅ'ಕ್ಕೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಉದ್ಯೋಗ ವಿನಿಮಯ ಕಛೇರಿಗಳ ಕಾರ್ಯನಿರ್ವಹಣೆ ಬಗ್ಗೆ

೪೬೨. (ಇ) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಯಾವ ಯಾವ ವಿಭಾಗದಲ್ಲಿ ನೋಂದಣಿ ಮಾಡಿದವರ ಸಂಖ್ಯೆ ಎಷ್ಟು ?

(ಆ) ಎಷ್ಟೋ ಸಾರಿ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಜಿಲ್ಲಾ ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ನೋಂದಣಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಇದರಿಂದ, ಉದ್ಯೋಗಾರ್ಥಿಗಳ ಸಂಖ್ಯೆ ಕೃತ್ರಿಮವಾಗಿ ಹೆಚ್ಚಾಗುವುದಿಲ್ಲವೇ ಹಾಗೂ ಜಿಲ್ಲಾ ಕೇಂದ್ರಗಳು ಹೆಸರುಗಳನ್ನು ಅನುಕ್ರಮವಾಗಿ ಸೂಚಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಈ) ಹಾಗಿದ್ದಲ್ಲಿ, ಪರಿಸ್ಥಿತಿಯನ್ನು ಸರಿಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

(ಅ) ದಿನಾಂಕ ೩೧-೧೨-೧೯೮೬ರಂದು

೧. ಸ್ನಾತಕೋತ್ತರ ಪದವೀಧರರು	...	೮,೨೭೫
೨. ಪದವೀಧರರು	...	೯೯,೪೨೧
೩. ತಾಂತ್ರಿಕ ವಿದ್ಯಾರ್ಹತೆಯುಳ್ಳವರು	...	೩೮,೬೯೨
೪. ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರು	...	೫,೮೯,೩೩೮
೫. ಎಸ್.ಎಸ್.ಎಲ್.ಸಿ. ಅನುತ್ತೀರ್ಣರು	...	೧,೮೭,೧೨೧
೬. ಅಕ್ಷರಸ್ಥರು, ಅನಕ್ಷರಸ್ಥರು, ಮತ್ತಿತರರು	...	೧,೬೮,೫೬೮

(ಆ) ಬಂದಿರುತ್ತದೆ,